


# ಗೋಕಾಕ್ ಕಲಾಗುರುತು



**ಕನ್ನಡ ನಾಡು–ನುಡಿ ಇತಿಹಾಸದ ಮೊಗಸಾಲೆಯಲ್ಲಿ ಮೂಡಿರುವ ಪ್ರಮುಖ ಹೆಜ್ಜೆಗುರುತುಗಳಲ್ಲೊಂದು 'ಗೋಕಾಕ್ ಚಳವಳಿ'. ಮಹತ್ವದ ಮೈಲಿಗಲ್ಲಾಗಿ ಗೋಚರಿಸುತ್ತದೆ. 'ಕರ್ನಾಟಕ ಸುವರ್ಣ ಸಂಭ್ರಮ' ಸಂದರ್ಭದಲ್ಲಿ ಚಳವಳಿಯ ನೆನಪುಗಳು ಕಲಾಕೃತಿಗಳ ರೂಪದಲ್ಲಿ ಅಭಿವ್ಯಕ್ತಗೊಂಡಿವೆ.**

■ **ಈರಣ್ಣ ಬೆಂಗಾಲಿ**

ಕನ್ನಡದ ನೆಲ, ಭಾಷೆಯ ಅಸ್ಮಿತೆಗಾಗಿ ನಡೆದ ಹೋರಾಟಗಳಲ್ಲಿ 'ಗೋಕಾಕ್ ಚಳವಳಿ'ಯದ್ದು ಪ್ರಮುಖ ಸ್ಥಾನ. ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ಅಚ್ಚಳಿಯದೇ ಉಳಿದಿರುವ ಈ ಚಳವಳಿ, ಕನ್ನಡಿಗರು ಎಂದಿಗೂ ನೆನಪಿನಲ್ಲಿಟ್ಟುಕೊಳ್ಳಬೇಕಾದ ಮಹತ್ತರ ಮೈಲಿಗಲ್ಲು ಕೂಡ.

ಭಾಷಾ ನೀತಿಯಲ್ಲಿ ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕೆಂದು ಆಗ್ರಹಿಸಿ ಎಂಬತ್ತರ ದಶಕದಲ್ಲಿ ರೂಪುಗೊಂಡ ಗೋಕಾಕ್ ಚಳವಳಿ ತೊರೆಗಳೆಲ್ಲ ಸೇರಿ ನದಿಯಂತೆ ಹಲವು ಕ್ಷೇತ್ರಗಳ ಗಣ್ಯರ ಭಾಗವಹಿಸುವಿಕೆಯಿಂದಾಗಿ ಬಹು ದೊಡ್ಡ ಆಂದೋಲನವಾಯಿತು. ಸಾಹಿತಿ ವಿ.ಕೃ. ಗೋಕಾಕ್ ಅವರು ಸಿದ್ಧಪಡಿಸಿದ 'ಗೋಕಾಕ್ ಭಾಷಾ ಸೂತ್ರ'ದ ವರದಿಯ ಪ್ರಸ್ತಾವ ತಿರಸ್ಕೃತಗೊಂಡ ಬೆನ್ನಲ್ಲೇ ಚಳವಳಿ ಕಾವು ಪಡೆದುಕೊಂಡಿತು. ವರನಟ ರಾಜಕುಮಾರ್ ಅವರ ಬೆಂಬಲ ಚಳವಳಿಗೆ ಆನೆಬಲ ತುಂಬಿತು. ಚಳವಳಿಗೆ ಸ್ಪಂದಿಸಿದ ಸರ್ಕಾರ, ಗೋಕಾಕ್ ವರದಿಯ ಅವಶ್ಯಕತೆಯನ್ನು ಮನಗಂಡು ಕನ್ನಡ ಭಾಷೆಗೆ ಮೊದಲ

